**ಓ .ಎಸ್ . ನಂ. 228/2020** **ಪಿಡಬ್ಲ್ಯೂ: 1**

**ದಿನಾಂಕ : 24.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ – ಶ್ರೀ ಎಂ ಡಿ ವಾದಿ ಪರ ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿರುತ್ತದೆ ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನಾನು ನನ್ನ ದಾವೆಯ ಜೊತೆಗೆ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| | |
|---|---|
| ನಿಪಿ–1 | ದಿಃ09.05.2008 ರ ಕ್ರಯಪತ್ರದ ದೃಡೀಕೃತ ನಕಲು |
| ನಿಪಿ–2 | ಓ ಎಸ್ 224/2011 ರ ತೀರ್ಪಿನ ದೃಡೀಕೃತ ನಕಲು |
| ನಿಪಿ–3 | ಓ ಎಸ್ 224/2011 ರ ಡಿಕ್ರಿಯ ದೃಡೀಕೃತ ನಕಲು |
| ನಿಪಿ–4 | ಓ ಎಸ್ 258/2008 ರ ತೀರ್ಪಿನ ದೃಡೀಕೃತ ನಕಲು |
| ನಿಪಿ–5 | ಓ ಎಸ್ 258/2008 ರ ಡಿಕ್ರಿಯ ದೃಡೀಕೃತ ನಕಲು |
| ನಿಪಿ–6 | ದಿಃ28.05.2012 ರ ಕ್ರಯಪತ್ರದ ದೃಡೀಕೃತ ನಕಲು |
| ನಿಪಿ–7 | ಪಹಣಿ ಪತ್ರಿಕೆ |

ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ